ಸಭೆಯಲ್ಲಿ ವಿಷಯ ಮಂಡಿಸಿ ಅನುಮೋದನೆ ಪಡೆದುಕೊಂಡು ಹಂಚಿಕೆ ಮಾಡಲಾಗಿದೆ. ಇಲ್ಲಿನ ಬಡಾವಣೆಯಲ್ಲಿ ಎಲ್ಲಾ ನಾಗರೀಕ ಮೂಲ ಸೌಲಭ್ಯಗಳನ್ನು ಕಲ್ಪಿಸಿರುವುದರಿಂದ ಹಂಚಿಕೆದಾರರು ಮನೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

ಯಗಚಿ ಮುಳುಗಡೆ ರೈತರಿಗೆ ಪರಿಹಾರ ಧನ ಹಾಗೂ ಜಮೀನು ಮಂಜೂರು

516 - ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಯಗಚಿ ಮುಳುಗಡೆ ರೈತರಿಗೆ ಇನ್ನೂ ಸಹ ಪರಿಹಾರಧನ ವಿತರಿಸದಿರುವುದು ಮತ್ತು ಜಮೀನು ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಮತ್ತು ಸರ್ಕಾರ ಈ ಬಗ್ಗೆ ತೆಗೆದುಕೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು.) :

ಅ) ಹೌದು.

ಆ) 16 ಗ್ರಾಮಗಳ ಜಮೀನು ಮನೆಗಳಿಗೆ ಪರಿಹಾರ ಪಾವತಿಸಲಾಗಿದೆ. ಹೆಚ್ಚಿನ ಪರಿಹಾರ ಕೋರಿ ಕಲಂ 18 ರಂತೆ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಗಳ ವಿಚಾರಣೆಗಾಗಿ ಸರ್ಕಾರವು ಲೋಕ್ ಅದಾಲತ್ ನಡೆಸಲು ಅನುಮತಿ ನೀಡಿದೆ. 1995ರಲ್ಲಿ ಲೋಕ್ ಅದಾಲತ್ ನಡೆದು ಪರಿಹಾರ ಪಾವತಿಸಲು ಆದೇಶವಾಗಿದೆ. ಈ ಪೈಕಿ ಇದುವರೆಗೆ ರೂ. 51,20,777-00 ಪರಿಹಾರ ಪಾವತಿಸಲಾಗಿದೆ. ಬಾಕಿ 50,00,000-00 ರೂ. ಬಾಕಿ ಇರುತ್ತದೆ. ಹಲವು ಗ್ರಾಮಗಳಿಗೆ ಅವಾರ್ಡನ್ನು ಮಂಜೂರು ಮಾಡಲಾಗಿದ್ದು, ಉಳಿದ ಗ್ರಾಮಗಳಿಗೆ ಅವಾರ್ಡ್ ಮಂಜೂರು ಮಾಡುವ ಅಂತಿಮ ಹಂತದಲ್ಲಿರುತ್ತದೆ.

ಯಗಚಿ ಮುಳುಗಡೆ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಲು 6236-10 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ. ಕಾಯ್ದಿರಿಸಿದ ಜಮೀನುಗಳಲ್ಲಿ ಬಹುಪಾಲು ಸ್ಥಳೀಯ .ಭೂರಹಿತರು ಮತ್ತು ಗ್ರಾಮಸ್ಥರು ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿದ್ದು ಇದರಿಂದ ಖಿಲ್ಲಾಪಡಿಸಲು ಪ್ರತ್ಯೇಕ ಕ್ರಮ ವಹಿಸಲಾಗಿದೆ. ಈ ಬಗ್ಗೆ ಸಿ ಮತ್ತು ಡಿ ದರ್ಜೆಯ ಜಮೀನುಗಳು ಖಿಲ್ಲಾ ಇರುವ ಬಗ್ಗೆ ಮಾಹಿತಿ ಪಡೆದಿದ್ದು ಕೂಡಲೇ ಪುನರ್ ವಸತಿ ಕಲ್ಪಿಸಲು ಕ್ರಮ ವಹಿಸಲಾಗಿದೆ. ಮೇಲ್ಕಂಡ ಕಾರಣಗಳಿಂದ ಪುನರ್ವಸತಿ ವಿಳಂಬವಾಗುತ್ತಿರುತ್ತೆ.

ರಾಜ್ಯದಲ್ಲಿನ ಗೇರು ಕೃಷಿಗೆ ನೀಡಲಾದ ಸಾಲದ ಮರುಪಾವತಿ ಕುರಿತು

517 - ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಗೇರು ಕೃಷಿಗಾಗಿ ಕಳೆದ ಐದು ವರ್ಷಗಳಲ್ಲಿ ಪಿಕಾರ್ಡ್ ಬ್ಯಾಂಕುಗಳ*

ಮೂಲಕ ವಿತರಿಸಲಾದ ಸಾಲದ ಮೊಬಲಗು ಎಷ್ಟು? ಅದರಲ್ಲಿ ಮರುಪಾವತಿಯಾಗದೇ ಉಳಿದಿರುವ ಮೊಬಲಗು ಎಷ್ಟು?

ಆ) ಸಾಲ ಸೌಲಭ್ಯವನ್ನು ಪಡೆದುಕೊಂಡು ಮರುಪಾವತಿ ಮಾಡಲಾಗದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮರು ಪಾವತಿಯಲ್ಲಿ ವಿನಾಯಿತಿಯನ್ನು ನೀಡುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ?

ಇ) ಇದ್ದಲ್ಲಿ ಆದಷ್ಟು ಶೀಘ್ರವಾಗಿ ಜಾರಿಗೆ ತಂದು ಆ ವರ್ಗದ ಜನರಿಗೆ ಅನುಕೂಲ ಮಾಡಿಕೊಡುವರೇ?

ಶ್ರೀ. ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) 1994-95 ರಿಂದ 1998-99 ರವರೆಗೆ ನೀಡಿರುವ ಸಾಲದ ಮೊತ್ತ ರೂ. 9.78 ಲಕ್ಷ.

ಈ ಸಾಲದ ಮರುಪಾವತಿಯು 6 ವರ್ಷಗಳ ನಂತರವಾಗುವುದರಿಂದ ಬಾಕಿ ಮರು ಪಾವತಿಯ ಪ್ರಶ್ನೆ ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಆ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಇವರು ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಹಂತಲ್ಲಿ ಪರಿಶೀಲಿಸಲಾಗುವುದು.

ಇ) ಪರಿಶೀಲಿಸಲಾಗುತ್ತಿದೆ.

ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

518 - ಶ್ರೀ ಪ್ರಭಾಕರ್ ಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕಳೆದ 5 ವರ್ಷಗಳಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು ಎಷ್ಟು? ಅದಕ್ಕೆ ವೆಚ್ಚ ಮಾಡಲಾದ ಮೊಬಲಗು ಎಷ್ಟು?

ಆ) ಸಮಿತಿಯವತಿಯಿಂದ ಮುಂದೆ ಹಮ್ಮಿಕೊಳ್ಳಲಾಗಿರುವ ಯೋಜನೆಗಳ ವಿವರಗಳೇನು?

ಶ್ರೀ. ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಕಳೆದ ಐದು ವರ್ಷಗಳಲ್ಲಿ ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 4 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದಕ್ಕಾಗಿ ರೂ 18,64,727.00 ಮೊಬಲಗಲನ್ನು ಮಾಡಲಾಗಿದೆ.

ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅನುದಾನದಿಂದ 19 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದಕ್ಕಾಗಿ 26.56 ಲಕ್ಷ ರೂ. ಮೊಬಲಗಳನ್ನು ವೆಚ್ಚ ಮಾಡಿದೆ.